# ಹೂವು ಚೆಲುವು ದುಂಬಿ ನಲಿವು

ಮಂಜುನಾಥ ಸಿ.

ಮನೆಯ ಮುಂದೆ
ಹೂವಿನ ಸಸಿಯ
ಪುಟ್ಟಿ ತಾನು ನೆಟ್ಟಳು
ಮುಳ್ಳು ತಂದು
ಸಸಿಯ ಸುತ್ತ
ಬೇಲಿಯನ್ನು ಇಟ್ಟಳು

ನೀರು ಗೊಬ್ಬರ
ಕ್ರಮದಿ ಸುರಿದು
ದಿನವು ಪೊರೆದಳು
ಪ್ರೀತಿ ಮಮತೆ
ನೀಡಿ ಗಿಡಕೆ
ಒಲವ ಮಳೆಯ
ಕರೆದಳು

ನೀರು ಕುಡಿದು
ಗೊಬ್ಬರ ಸವಿದು
ಗಿಡವು ಬೆಳೆಯಿತು
ಹಸಿರು ಎಲೆಯ
ತುಂಬಿಕೊಂಡು
ಬಳ್ಳಿ ರೂಪ ಪಡೆಯಿತು

ನೆಲದ ಸತ್ವ ಸಾರ ಉಂಡು
ಸುಮವು ಅರಳಿತು
ಅರಳಿ ನಿಂತ ಹೂವ
ಕಂಡು ದುಂಬಿ ಸುಳಿಯಿತು

ಹೂವು ಚೆಲುವು
ದುಂಬಿ ನಲಿವು
ಕಣ್ಣಿಗೆಷ್ಟು ಅಂದ
ಇಂಥ ಸುಖವ
ಪಡೆವೆ ನೀನು
ಗಿಡವ ಬೆಳೆಸು ಕಂದ



ಚಿತ್ರ: ಮಂಜುನಾಥ ಹುಲಕೊಪ್ಪದ



ಚಿತ್ರ: ಮಂಜುನಾಥ ಹುಲಕೊಪ್ಪದ

# ನೀ ಜಾಣೆ ಆಗೇ ನನ್ನಮ್ಮ!

ಪೂರ್ಣೇಶ್ ಮತ್ತಾವರ

ಚಾಕಿ ತಿಂದರೆ,
ಹುಳ ಬರುತ್ತಲ್ಲವೇ?
ನನಗದು ಬೇಡ ನನ್ನಮ್ಮ!
ತಣ್ಣನೆ ಐಸ್ ಕ್ರೀಮ್
ಬಟ್ಟಲನೊಂದ
ನನಗದು ಕೊಡಿಸೆ ನನ್ನಮ್ಮ!

ಟೀವಿ ನೋಡಿರೆ,
ಕಣ್ಣ ನೋವಲ್ಲವೇ?
ನೋಡೆನು ನಾನು ನನ್ನಮ್ಮ!
ರೇಸಿನ ಗೇಮ್ ಅದ
ಆಡಿ ಕೊಡುವೆನು
ಮೊಬೈಲನು ತೋರಿಸೆ ನನ್ನಮ್ಮ!

ನಲ್ಲಿಯ ನೀರದು,
ಜ್ವರ ತರುತ್ತಲ್ಲವೇ?
ಆಡೆನು ಅಲ್ಲಿ ನನ್ನಮ್ಮ!
ಚೆಂದದ ಮಳೆಯಲಿ
ಕುಣಿ ಕುಣಿದಾಡಲು
ಹೊರಗಡೆ ಕಳಿಸೆ ನನ್ನಮ್ಮ!

ನಿನ್ನಯ ಮಾತನು
ಕೇಳುವ ನಾನು,
ಜಾಣನು ಅಲ್ಲವೇ ನನ್ನಮ್ಮ!
ನನ್ನಯ ಮಾತನು
ಕೇಳುತ ನೀನು,
ಜಾಣೆಯು ಆಗೇ ನನ್ನಮ್ಮ!